

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸಮ್ಮೇಳನ ಮತ್ತು ವೈಚಾರಿಕತೆಯ ಪ್ರಹಸನ.....

ಆಕಾಶದಲ್ಲಿ ಸಂಚರಿಸುವ ಗ್ರಹನಕ್ಷತ್ರಗಳ ಗತಿವಿಧಾನಗಳನ್ನು ಸೂಕ್ಷ್ಮವಾಗಿ ಗಮನಿಸಿ ನಭೋಮಂಡಲದ ರಹಸ್ಯವನ್ನು ಭೇದಿಸುವ ಯತ್ನ ನಿರಂತರವಾಗಿ ಖಗೋಳವಿಜ್ಞಾನಿಗಳಿಂದ ನಡೆಯುತ್ತಾ ಬಂದಿದೆ. ಯಾವ ಟೆಲಿಸ್ಕೋಪ್ ಸಹಾಯ ಇಲ್ಲದೆ ಜನಸಾಮಾನ್ಯರೂ ನೋಡಿ ಆನಂದಿಸಬಹುದಾದ ಕೆಲವೊಂದು ವಿಸ್ಮಯಕಾರಿ ಘಟನೆಗಳು ಆಗಾಗ್ಗೆ ಪತ್ರಿಕೆಗಳಲ್ಲಿ ವರದಿಯಾಗುತ್ತಿರುತ್ತವೆ. ಅಂತಹ ಒಂದು ಅಪರೂಪದ ಘಟನೆಯೆಂದರೆ ಕಳೆದ ಜನವರಿಯ ಕೊನೆಯಲ್ಲಿ ಶುಕ್ರ ಮತ್ತು ಚಂದ್ರ ಪರಸ್ಪರ ತೀರಾ ಸನಿಹಕ್ಕೆ ಬಂದದ್ದು. ಹಾಗೇನೇ ಪ್ರತಿವರ್ಷ ನಾಡಿನಾದ್ಯಂತ ಅರ್ಧಶತಮಾನಕ್ಕೂ ದೀರ್ಘ ಕಾಲ ಜಾತಿಮತಭೇದವಿಲ್ಲದೆ ಜನಮಾನಸದಲ್ಲಿ ಭಾವೈಕ್ಯವನ್ನು ಮೂಡಿಸುತ್ತಾ ನಾಡಹಬ್ಬವಾಗಿ ಜನಮನ್ನಣೆ ಪಡೆದ ನಮ್ಮ ಮಠದ ವಾರ್ಷಿಕ ಸಮಾರಂಭವಾದ ತರಳಬಾಳು ಹುಣ್ಣಿಮೆ ಮಹೋತ್ಸವ ಮತ್ತು ನಮ್ಮ ನಾಡಿನ ಕನ್ನಡ ಸಾಹಿತ್ಯ ಸಮ್ಮೇಳನ ಇವೆರಡೂ ಈ ತಿಂಗಳ ಆರಂಭದಲ್ಲಿ ತೀರಾ ಸನಿಹಕ್ಕೆ ಬಂದಿದ್ದವು - ಒಂದು ದಾವಣಗೆರೆಯಲ್ಲಿ ನಡೆದರೆ (ಫೆ.1-9) ಮತ್ತೊಂದು ಚಿತ್ರದುರ್ಗದಲ್ಲಿ (ಫೆ.4-7) ನಡೆಯಿತು. 'ಶ್ರೇಯಾಂಸಿ ಬಹುವಿಘ್ನಾನಿ' ಎನ್ನುವಂತೆ ಸಾಹಿತ್ಯ ಸಮ್ಮೇಳನದ ಅಮೃತ ಮಹೋತ್ಸವ ಒಂದು ಹಂತದಲ್ಲಿ ಚಿತ್ರದುರ್ಗದಲ್ಲಿ ನಡೆಯುವುದೋ ಇಲ್ಲವೋ ಎಂಬ ಆಶಂಕೆ ಮತ್ತು ಆತಂಕ ಜಿಲ್ಲೆಯ ಸಾಹಿತ್ಯಾಸಕ್ತರಲ್ಲಿ ಮೂಡಿತ್ತು. ಹೆಚ್ಚಿನ ಸಿದ್ಧತೆಗಳನ್ನು ಮಾಡಿಕೊಳ್ಳಲು ಸ್ವಾಗತ ಸಮಿತಿಯು ಕಾಲಾವಕಾಶವನ್ನು ಕೇಳಿದರೂ ಕೇಂದ್ರ ಸಮಿತಿಯು ಮಾನ್ಯತೆ ನೀಡಲಿಲ್ಲ. ನಿಗದಿಪಡಿಸಿದ ದಿನಾಂಕದಂದು ಮದುವೆ ಮಾಡಿಕೊಡದಿದ್ದರೆ ನಿಮ್ಮ ಹೆಣ್ಣೇ ಬೇಡ ಎನ್ನುವ ಗಂಡಿನವರ ಧೋರಣೆಯಿಂದಾಗಿ ತರಾತುರಿಯಲ್ಲಿ ಮಾಡಿದ ಸಿದ್ಧತೆ ಕೊನೆಗೂ ಚಿತ್ರದುರ್ಗಕ್ಕೆ ಕೆಟ್ಟ ಹೆಸರನ್ನು ತಂದಿತು. ಗಂಡುಮೆಟ್ಟಿನ ನಾಡಾದ ಚಿತ್ರದುರ್ಗಕ್ಕೆ ಕಳಂಕ ಬರಬಾರದೆಂಬ ದೃಷ್ಟಿಯಿಂದ ಜಿಲ್ಲೆಯ ಮಠಾಧೀಶರೆಲ್ಲರೂ ಒಂದಾಗಿ ಮಾಡಿದ ಎಲ್ಲ ಪ್ರಯತ್ನಗಳು ವಿಫಲವಾಗಿ ಮುಂದೆ ಹೇಗೆ ಸಮ್ಮೇಳನವನ್ನು ಮಾಡಬಾರದೆಂಬುದಕ್ಕೆ ಒಂದು ಕೆಟ್ಟ ಉದಾಹರಣೆಯಾಗಿ ಪರಿಣಮಿಸಿದ್ದು ದುರದೃಷ್ಟಕರ.

ಸಮ್ಮೇಳನಾಧ್ಯಕ್ಷರು ಚಿತ್ರದುರ್ಗಕ್ಕೆ ಕಾಲಿಡುತ್ತಿದ್ದಂತೆಯೇ 'ಮಠಾಧೀಶರು ನಮ್ಮ ಶತ್ರುಗಳು' ಎಂಬ ರಣಕಹಳೆಯನ್ನು ಊದಿದರು. ಮೆರವಣಿಗೆಯಲ್ಲಿ ಬಂದು ಸಾನ್ನಿಧ್ಯ ವಹಿಸಿ ವಧೂವರರನ್ನು ಹರಸಿ ಕಾಣಿಕೆ ಪಡೆಯಬೇಕಾಗಿದ್ದ ಸ್ವಾಮಿಗಳು ಸ್ವತಃ ಕಾಣಿಕೆ ಕೊಟ್ಟು ಮುಂದೆ ನಿಂತು ಸಾಹಿತ್ಯಕನ್ನಿಕೆಯ ಮದುವೆ ಮಾಡಿಸಿ 'ಮದುಮಕ್ಕಳ' ಮೆರವಣಿಗೆ ಮಾಡಿಸಿದರೂ ಬೀಗರ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ಶತ್ರುಗಳೆಂದು ಗೊತ್ತಿದ್ದೂ ಬೀಗತನ ಮಾಡುವ ಉದ್ದೇಶ ಬೀಗರಿಗೆ ಏನಿತ್ತೋ ದೇವರೇ ಬಲ್ಲ! ಹಿಂದೆ ರಾಜಮಹಾರಾಜರು ಯುದ್ಧ ಬೇಡವೆಂದು ಬಲಿಷ್ಠ ರಾಜನಿಗೆ ರಾಜಕುಮಾರಿಯನ್ನು ಮದುವೆ ಮಾಡಿಕೊಟ್ಟು ಸಖ್ಯ ಬೆಳೆಸುತ್ತಿದ್ದರಂತೆ. ಅಂತಹ ಸನ್ನಾಹವೇನಾದರೂ ಚಿತ್ರದುರ್ಗದಲ್ಲಿ ನಡೆದಿರಬಹುದೇ! ಸಾಹಿತ್ಯಸಮ್ಮೇಳನದ ಇತಿಹಾಸಜ್ಞರು ಸಂಶೋಧನೆ ಮಾಡುವುದೊಳಿತು.

ಸಮ್ಮೇಳನದ ಉದ್ಘಾಟನಾ ಸಮಾರಂಭಕ್ಕೆ ನಿಗದಿತ ವೇಳೆಗೆ ಸರಿಯಾಗಿ ಹೋದಾಗ ಇನ್ನೂ 'ಅತಿಥಿಗಳು' ಯಾರೂ ಬಂದಿರಲಿಲ್ಲ. ಮೇಲಿನ ಹೇಳಿಕೆಯ ಹಿನ್ನೆಲೆಯಲ್ಲಿ ವೇದಿಕೆ ಎಲ್ಲಿ ರಣರಂಗವಾಗಿ ಪರಿಣಮಿಸುತ್ತದೋ ಎಂಬ ಆತಂಕ ನಮ್ಮ ಮನಸ್ಸಿನಲ್ಲಿ ಸುಳಿದಾಡುತ್ತಿತ್ತು. ಹೋಗಬಾರದೆಂದು ಅನೇಕರು ಒತ್ತಾಯಪಡಿಸಿದರೂ ಧಿಕ್ಕರಿಸಿ ಸಾಹಿತ್ಯದ ಬಗ್ಗೆ ನಮಗಿರುವ ಒಲವಿನ ಹಿನ್ನೆಲೆಯಲ್ಲಿ ಹೋಗಿದ್ದೆವು. ಅರ್ಧಗಂಟೆ ತಡವಾಗಿ ಆಗಮಿಸಿದ ಸಮ್ಮೇಳನಾಧ್ಯಕ್ಷರು ನಿಗದಿತ ಆಸನದಲ್ಲಿ ಕುಳಿತುಕೊಂಡರು. ಸನಿಹದಲ್ಲಿದ್ದ ಅವರೊಂದಿಗೆ ಉಭಯಕುಶಲೋಪರಿ ಆರಂಭವಾಯಿತು. ಅವರ ಮಾತಿನಲ್ಲಿ ಯಾವ ಶತ್ರುತ್ವಭಾವನೆಯೂ ಗೋಚರಿಸಲಿಲ್ಲ. ಅವರ ನೆನಪಿನಂಗಳದಿಂದ ಕೆಲವಾರು ಘಟನೆಗಳು ಮಾರ್ದನಿಸಿದವು. ಅವರ ಮಗ ತೀರಿಕೊಂಡಾಗ ನಮ್ಮ ಲಿಂಗೈಕ್ಯ ಗುರುವರ್ಯರು ಅವರ ಮನೆಗೆ ದಯಮಾಡಿಸಿ ಅವರಿಗೆ ಸಾಂತ್ವನ ಹೇಳಿ ಜೀವನೋತ್ಸಾಹ ತುಂಬಿದ್ದರಂತೆ. ಮಾತಿನ ಪ್ರಸಂಗದಲ್ಲಿ ನಮ್ಮ ವಿಶ್ವಶಾಂತಿಯಾತ್ರೆಯಲ್ಲಿ ಸ್ವಿಟ್ಸರ್‌ಲ್ಯಾಂಡ್‌ನಲ್ಲಿರುವ ಅವರ ಮಗಳು ಶ್ರೀಮತಿ ನಳಿನಿ ಭೇಟಿಯಾಗಿದ್ದ ಪ್ರಸಂಗವನ್ನು ಪ್ರಸ್ತಾಪಿಸಿದಾಗ 'ನನ್ನ ಮಗಳಿಗೆ ಒಂದು ಮೆಡಿಕಲ್ ಸೀಟು ಬೇಕಾಗಿತ್ತು; ಆಗ ತಮ್ಮ ಗುರುಗಳ ಹತ್ತಿರ ಬಂದಿದ್ದೆ' ಎಂದು ಹೇಳಿದರು. ನಮ್ಮ ಮಠದ ಯಾವ ಮೆಡಿಕಲ್ ಕಾಲೇಜೂ ಇಲ್ಲ. ಮುಂದೇನಾಯಿತು ಎಂದು ಕೇಳುವುದರೊಳಗೆ ಮುಖ್ಯಮಂತ್ರಿಗಳು ಬಂದು ಮಧ್ಯೆ ಕುಳಿತ ಕಾರಣ ಮಾತು ಮುಂದುವರಿಸಲಾಗಲಿಲ್ಲ.

ಸಮ್ಮೇಳನಾಧ್ಯಕ್ಷರ ರಣಕಹಳೆಗೆ ಪ್ರತಿಕಹಳೆಯನ್ನು ಅಂದಿನ ಸಭೆಯಲ್ಲಿ ಸಿರಿಗೆರೆ ಗುರುಗಳು ಮೊಳಗಿಸುತ್ತಾರೆಂಬ ಅನೇಕರ ನಿರೀಕ್ಷೆ ಹುಸಿಯಾಗಿತ್ತು. ಎಲ್.ಬಿ ಅವರೊಂದಿಗೆ ನಡೆದ ನಮ್ಮ ಸಂಭಾಷಣೆಯ ಹಿನ್ನೆಲೆಯಲ್ಲಿ ಆರಂಭದ ದಿನವೇ ಸಭೆಯನ್ನು ರಣರಂಗವನ್ನಾಗಿಸುವ ಮನಸ್ಸು ನಮಗೆ ಇರಲಿಲ್ಲ. ಆದರೆ ಪತ್ರಿಕಾವರದಿಗಾರರು ಸುಮ್ಮನಿರಲು ಬಿಡುತ್ತಾರೆಯೇ? ಮಾರನೆಯ ದಿನ ನಮ್ಮನ್ನು ಪ್ರಶ್ನಿಸಿದರು. 'No comments' ಎಂದು ಹೇಳಿ ಜಾರಿಕೊಳ್ಳುವ ಜಾಯಮಾನ ನಮ್ಮದಲ್ಲ. ನಮ್ಮ ಪ್ರತಿಕ್ರಿಯೆ ನಮ್ಮ ಶಬ್ದಗಳಲ್ಲಿ ಹೀಗಿತ್ತು: 'ಮಠಾಧೀಶರು ನಮ್ಮ ಶತ್ರುಗಳು' ಎಂದು ಎಲ್.ಬಿ ಅವರು ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಅವರ ಹೇಳಿಕೆಯಲ್ಲಿ 'ನಮ್ಮ' ಶಬ್ದದ ಅರ್ಥ ವೈಯಕ್ತಿಕವಾಗಿದ್ದರೆ ಅದಕ್ಕೆ ಪ್ರತಿಕ್ರಿಯಿಸುವ ಅಗತ್ಯ ಇಲ್ಲ. ಅದರ ಅರ್ಥ 'ಸಾಹಿತ್ಯ/ಸಾಹಿತಿಗಳು' ಎಂದಾಗಿದ್ದರೆ ಮಠಾಧಿಪತಿಗಳಾರೂ ಕನ್ನಡಸಾಹಿತ್ಯದ ಮತ್ತು ಸಾಹಿತಿಗಳ ಶತ್ರುಗಳು ಅಲ್ಲ. ಒಂದಲ್ಲ ಒಂದು ರೀತಿಯಲ್ಲಿ

ಸಾಹಿತ್ಯ/ಸಾಹಿತಿಗಳ ಪೋಷಣೆ ಮಾಡಿಕೊಂಡು ಬಂದಿದ್ದಾರೆ. ಈ ರೀತಿ ಮಾತನಾಡಲು ಅವರಿಗೆ ಶಕ್ತಿ ಬಂದದ್ದು ಬಾಲ್ಯದಲ್ಲಿ ಸಿದ್ಧಗಂಗಾಮಠದಲ್ಲಿ ಪಡೆದ ಶಿಕ್ಷಣದಿಂದಲೇ ಅಲ್ಲವೇ? ಶತ್ರುಗಳಾಗಿದ್ದರೆ ಅವರ ಶೂನ್ಯಸಂಪಾದನೆ, ಶಬ್ದಮಣಿದರ್ಪಣ ಇತ್ಯಾದಿ ಪುಸ್ತಕಗಳನ್ನು ಚಿತ್ರದುರ್ಗದ ಮುರುಘಾಮಠವು ಹೇಗೆ ಪ್ರಕಟಿಸುತ್ತಿತ್ತು? ಒಂದು ಪಕ್ಷ ಎಲ್.ಬಿ ಅವರ ದೃಷ್ಟಿಯಲ್ಲಿ ಮಠಾಧೀಶರು ಶತ್ರುಗಳಾಗಿದ್ದರೆ ಅಂತಹ ಶತ್ರುಗಳು ನೀಡಿದ ಆಹ್ವಾನವನ್ನು ಅವರು ಒಪ್ಪಿಕೊಳ್ಳದೆ ತಿರಸ್ಕರಿಸಬೇಕಾಗಿತ್ತು. ಎಷ್ಟೋ ವೇಳೆ ಸಾಹಿತಿಗಳು ಕೆಲವೊಂದು ಸಂದರ್ಭಗಳಲ್ಲಿ ಸರ್ಕಾರದ ಧೋರಣೆಯನ್ನು ಖಂಡಿಸಿ ತಮಗೆ ಬಂದ ಪ್ರಶಸ್ತಿಗಳನ್ನು ಹಿಂತಿರುಗಿಸಿದ ಉದಾಹರಣೆಗಳು ಇಲ್ಲವೇ ಹಾಗೆ.

ನಮ್ಮ ಈ ಪ್ರತಿಕ್ರಿಯೆ ಪತ್ರಿಕೆಗಳಲ್ಲಿ 'ಅಗ್ಗದ ಜನಪ್ರಿಯತೆಗೆ ಅಪದ್ಧದ ಲೇಪ', 'ಸಮ್ಮೇಳನಾಧ್ಯಕ್ಷರಿಗೆ ತರಳಬಾಳು ಶ್ರೀ ತಿರುಗೇಟು' ಇತ್ಯಾದಿ ಶಿರೋನಾಮೆಗಳಲ್ಲಿ ಪ್ರಕಟವಾಗಿದೆ. ಇತ್ತೀಚೆಗೆ ನಡೆದ ವಿಚಾರಸಂಕಿರಣವೊಂದರಲ್ಲಿ ವಿದ್ವಾಂಸರೊಬ್ಬರು 'ನೀವು ಪತ್ರಿಕೆಯವರು ಇದ್ದೀರಲ್ಲಾ' ಎಂದು ಕೋಪತಾಪ ಪ್ರದರ್ಶಿಸಿ ತಮ್ಮ ಮೇಲೆ ಹರಿಹಾಯ್ದ ಬಗ್ಗೆ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್ ಅವರು 'ನೂರೆಂಟುಮಾತು' ಅಂಕಣದಲ್ಲಿ ಬರೆದದ್ದು ನಿಮಗೆ ನೆನಪಿರಬಹುದು. ಇದೆಲ್ಲವನ್ನೂ ಗಮನಿಸಿದಾಗ ಬಹಳ ವರ್ಷಗಳ ಹಿಂದೆ 'ಇತಿಹಾಸ'ವನ್ನು ಕುರಿತು ಇಂಗ್ಲೀಷ್‌ನಲ್ಲಿ ಓದಿದ ಒಂದು ಮಾತು ನೆನಪಾಗುತ್ತದೆ: "ನಿನ್ನೆ ಮೊನ್ನೆ ದಾರಿಯಲ್ಲಿ ಕಣ್ಣಾರೆ ಕಂಡ ಒಂದು ದುರ್ಘಟನೆಯನ್ನು ಕುರಿತು ವಿಭಿನ್ನ ಪತ್ರಿಕೆಗಳಲ್ಲಿ ಬಂದ ವಿಭಿನ್ನ ವರದಿಗಳನ್ನು ಓದಿದಾಗ ನೂರಾರು ವರ್ಷಗಳ ಹಿಂದಿನ ಇತಿಹಾಸ ಎಷ್ಟರಮಟ್ಟಿಗೆ ಸರಿ ಎಂಬ ಸಂಶಯ ಮೂಡುತ್ತದೆ". ಇತಿಹಾಸದ ಪುಸ್ತಕಗಳ ಬಗ್ಗೆಯೇ ಇಂತಹ ಅನುಮಾನ ಇರುವಾಗ ಪತ್ರಿಕಾ ವರದಿಗಳ ಆಧಾರದ ಮೇಲೆ ವಾದ-ವಿವಾದ ಮಾಡುವುದು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ಮೂಡುತ್ತದೆ. ಅದೇನೆ ಇರಲಿ.

ಸಮ್ಮೇಳನಾಧ್ಯಕ್ಷ ಸ್ಥಾನವನ್ನು ಸೌಜನ್ಯದಿಂದ ಒಪ್ಪಿಕೊಂಡರೂ ಸೌಜನ್ಯಕ್ಕೆ ಕಟ್ಟುಬೀಳದೆ ಹೇಳಬೇಕಾದ ಮಾತನ್ನು ನಿಷ್ಠುರವಾಗಿ ಹೇಳಿದ್ದಾರೆ ಎಂದು ಗುಣಗಾನ ಮಾಡಲೂ ಬರುತ್ತದೆ. ಆದರೆ ಸಮ್ಮೇಳನಾಧ್ಯಕ್ಷ ಪದವಿಯನ್ನು ತಿರಸ್ಕರಿಸಿ ಮಾತನಾಡಿದ್ದರೆ ಇನ್ನೂ ಹೆಚ್ಚಿನ ತೂಕ ಬರುತ್ತಿತ್ತು ಎಂಬುದೇ ನಮ್ಮ ಆಶಯ. ಇದರಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಹರಣದ ಮಾತೆಲ್ಲಿ ಬಂತು? ಒಂದು ಕಡೆ ಮಠಾಧೀಶರನ್ನು ಶತ್ರುಗಳೆಂದು ಹೀಗಳೆದು ಮತ್ತೊಂದು ಕಡೆ ಚಿತ್ರದುರ್ಗದ ಮಠಾಧೀಶರೊಂದಿಗೆ ಸಪತ್ನೀಕರಾಗಿ ಸಹಭೋಜನ ಮಾಡಿದ್ದು ಹೇಗೆ ಸಮರ್ಥನೀಯ? ಇನ್ನು 'ಮಠಾಧೀಶರು ಪ್ರಶ್ನಾತೀತರೇ?' ಎಂದು ಸಾಹಿತಿಗಳೊಬ್ಬರು 'ವಾಗ್ದಾಳಿ' ಮಾಡಿರುವುದಾಗಿ ವರದಿಯಾಗಿದೆ. ಈ ಪ್ರಪಂಚದಲ್ಲಿ ದೇವರೇ ಪ್ರಶ್ನಾತೀತ ಅಲ್ಲ. ದೇವರನ್ನು ನಂಬದ ಅನೇಕ ನಾಸ್ತಿಕರೂ ಇದ್ದಾರೆ. ಇನ್ನು ಮಠಾಧೀಶರು ಪ್ರಶ್ನಾತೀತರಾಗಲು ಹೇಗೆ ಸಾಧ್ಯ? ಪ್ರಜಾಪ್ರಭುತ್ವದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಆಜನ್ಮಸಿದ್ಧ ಹಕ್ಕು. ಆ ಹಕ್ಕು ಮಠಾಧೀಶರಿಗೂ ಇದೆ ಎಂಬುದನ್ನು ಮರೆಯಬಾರದು. ಅದನ್ನು ಯಾರೂ ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಧರ್ಮಗ್ರಂಥಗಳಾದರೂ ಧರ್ಮಬೋಧೆ ಮಾಡುವವರನ್ನು ಪ್ರಶ್ನೆ ಮಾಡದೆ ಅವರು ಹೇಳಿದ್ದಕ್ಕೆಲ್ಲ ಕೋಲೆಬಸವನಂತೆ ತಲೆಹಾಕು ಎಂದು ಹೇಳಿಲ್ಲ. 'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ' ಎನ್ನುತ್ತದೆ ಭಗವದ್ಗೀತೆ. ಗುರುಹಿರಿಯರ ಪದತಲದಲ್ಲಿ ಕುಳಿತು ಶ್ರದ್ಧೆಯಿಂದ (ಸೇವಯಾ) ಕೇಳು. ಆದರೆ ಅವರು ಹೇಳಿದ್ದನ್ನು ಯಥಾವತ್ತಾಗಿ ಸ್ವೀಕರಿಸದೆ ಪ್ರಶ್ನೆಮಾಡಿ (ಪರಿಪ್ರಶ್ನೇನ) ತಿಳಿದುಕೋ ಎಂಬ ಸ್ವಾತಂತ್ರ್ಯವನ್ನು ಕೊಡಲಾಗಿದೆ. 'ಹಿರಿಯರಾದರೇನು ಕಿರಿಯರಾದರೇನು ಅರಿವಿಂಗೆ ಹಿರಿದು ಕಿರಿದುಂಟೇ?' ಎನ್ನುತ್ತಾರೆ ಅಲ್ಲಮಪ್ರಭು. ಒಂದು ವಿಚಾರವನ್ನು ಯಾರು ಹೇಳುತ್ತಾರೆ ಎಂಬುದಕ್ಕಿಂತ ಏನು ಹೇಳುತ್ತಾರೆ ಎಂಬುದು ಮುಖ್ಯವಾಗಬೇಕು. ಮುಖ ನೋಡಿ ಮಣೆ ಹಾಕುವ ಪ್ರವೃತ್ತಿ ಹೋಗಬೇಕು. ಮಠಾಧೀಶರನ್ನು ಕುರಿತು ಸಮ್ಮೇಳನದಲ್ಲಿ ಮೂಡಿಬಂದ ಆಕ್ರೋಶವನ್ನು ಗಮನಿಸಿದರೆ ಮಠಾಧೀಶರಿಗಿಂತ ಸಮ್ಮೇಳನಾಧ್ಯಕ್ಷರೇ ಪ್ರಶ್ನಾತೀತರೆಂದು ಪ್ರತಿಪಾದಿಸಿದಂತೆ ತೋರುತ್ತದೆ. ಎಷ್ಟೇ ಆಗಲಿ ಸ್ವಜನಪ್ರೇಮ, ಬಿಟ್ಟುಕೊಡಲಾದೀತೆ!

ಸಾಹಿತಿಗಳೊಬ್ಬರು ಬಹಳ ವರ್ಷಗಳ ಹಿಂದೆ ಎಲ್.ಬಿ ಅವರು ಬರೆದ ಈ ಕೆಳಕಂಡ ಒಂದು ಕವಿತೆಯನ್ನು ಉದಾಹರಿಸಿ ಪ್ರಸ್ತುತ ವಿದ್ಯಮಾನಕ್ಕೆ ಕನ್ನಡಿ ಹಿಡಿದಿರುವುದಾಗಿ ವರದಿಯಾಗಿದೆ:

**ಕೆಂಪು ಬಟ್ಟೆಯನು ಕಂಡರೆ**
**ಕೆರಳಿ ಮೇಲೆ ನುಗ್ಗುವುದು ಗೂಳಿ**
**ಕಾವಿ ಬಟ್ಟೆಯನು ಕಂಡರೆ**
**ಹೊರಳಿ ಬೀಳುವುದು ಜನಜಂಗುಳಿ**
**ಗೂಳಿಗಿರುವ ಪ್ರಜ್ಞೆ**
**ಈ ಜನಕ್ಕಿಲ್ಲವಲ್ಲ!**

ಕವಿತೆ ಓದಲು ತುಂಬಾ ರೋಚಕವಾಗಿದೆ. ಆದರೆ ತನಗೆ ಜನ್ಮ ನೀಡಿದ ತಾಯಿ ಯಾರು, ಒಡಹುಟ್ಟಿದ ಅಕ್ಕ-ತಂಗಿ ಯಾರು ಎಂಬ ನೈತಿಕ ಪ್ರಜ್ಞೆ ಗೂಳಿಗೆ ಇರುವುದಿಲ್ಲ. ಅದನ್ನು ಗೂಳಿಗೆ ಕಲಿಸಲೂ ಬರುವುದಿಲ್ಲ. (ಆಡುಮಾತಿನಲ್ಲಿ ದುರಹಂಕಾರಕ್ಕೆ ಇನ್ನೊಂದು ಹೆಸರು 'ಗೂಳಿ'). ಗೂಳಿಗೆ ಇಲ್ಲದ ಈ ಪಾಪ ಪ್ರಜ್ಞೆ ಜನಜಂಗುಳಿಗೆ ಯಾರು ಕಲಿಸದಿದ್ದರೂ ಇದೆ ಎಂಬುದನ್ನು ಸುಶೀಲವಂತರು ಮನಗಾಣಬೇಕು. ಕೆಲವು ವಿಚಾರಗಳಲ್ಲಿ ಜನಜಂಗುಳಿಯನ್ನು ತಿದ್ದುವುದು ಕಷ್ಟ. ಆದರೂ ಸತತ ಪ್ರಯತ್ನದಿಂದ ಇಂದಲ್ಲ ನಾಳೆ ತಿದ್ದಲು ಬರುತ್ತದೆ. ಆ ಕೆಲಸವನ್ನು ನಮ್ಮ ಲಿಂಗೈಕ್ಯ ಗುರುವರ್ಯರು ಪರಿಣಾಮಕಾರಿಯಾಗಿ ಮಾಡಿದರು. ಸ್ವಾತಂತ್ರ್ಯಪೂರ್ವದಲ್ಲಿಯೇ ಸಿರಿಗೆರೆಯಲ್ಲಿ ಸ್ಥಾಪಿಸಿದ ಉಚಿತ ಪ್ರಸಾದನಿಲಯದಲ್ಲಿ ಹರಿಜನರಾದಿಯಾಗಿ ಎಲ್ಲ ವಿದ್ಯಾರ್ಥಿಗಳಿಗೂ ಜಾತಿಭೇದವಿಲ್ಲದೆ ಸಹಪಂಕ್ತಿ ಭೋಜನ ಮಾಡಿಸಿದರು. ಸ್ವಜಾತಿ ಹುಡುಗರೊಂದಿಗೆ ಅನ್ಯಜಾತಿಯವರನ್ನು ಒಟ್ಟಿಗೆ ಕೂರಿಸಬಾರದೆಂದು ಶಿಷ್ಯರಿಂದ ಎಷ್ಟೇ ಪ್ರತಿರೋಧ ಬಂದರೂ ಜಗ್ಗಲಿಲ್ಲ. ಮದುವೆಗಳನ್ನು ಅಮವಾಸ್ಯೆಯ ದಿನವೂ ಮಾಡಿಸಿದರು. 'ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ, ರಾಶಿಕೂಟ ಋಣಸಂಬಂಧ ಉಂಟೆಂದು ಹೇಳಿರಯ್ಯಾ' ಎಂಬ ಬಸವಣ್ಣನವರ ಆದರ್ಶ ತತ್ವಗಳನ್ನು ಅಂಧಶ್ರದ್ಧೆಗಳಿಂದ ಜಿಡ್ಡುಗಟ್ಟಿದ ಸಮಾಜದಲ್ಲಿ ಮೊಟ್ಟಮೊದಲಿಗೆ ಕಾರ್ಯರೂಪಕ್ಕೆ ತಂದರು. ಹಾಗೆ ಅಮವಾಸ್ಯೆಯ ದಿನ ಮದುವೆಯಾದ ದಂಪತಿಗಳಿಗೆ ಕೆಂಪಗಿರುವ ಮಕ್ಕಳು ಹುಟ್ಟಿದರೇ ವಿನಾ ಕಪ್ಪಾಗಿ ಏನೂ ಹುಟ್ಟಲಿಲ್ಲ!

"ಶಿವಮೊಗ್ಗದಲ್ಲೂ ಧಮಕಿ ಇತ್ತು. ನಂತರದ ಸಮ್ಮೇಳನಗಳಲ್ಲಿ ಈ ಬಗೆಯ ನೇರ ಹಸ್ತಕ್ಷೇಪವನ್ನು ನಮ್ಮ ರಾಜಕೀಯ ವಲಯದ 'ಪ್ರಭು'ಗಳು ಕಡಿಮೆ ಮಾಡಿದ್ದಾರೆ. ಆದರೆ 'ಸಿರಿಗರ' ಹೊಡೆಸಿಕೊಂಡ ಧಾರ್ಮಿಕ ವಲಯದ 'ಸ್ವಾಮಿ'ಗಳ ಕಿತಾಪತಿ ಮಾತ್ರ ಮೊನ್ನೆಯ ಸಮ್ಮೇಳನದಲ್ಲಿ ಎದ್ದು ಕಾಣುವಂತಿತ್ತು. ಇಂಥವರನ್ನು ಕೂಡ ನಮ್ಮ ಪ್ರಜ್ಞಾವಂತ ಕನ್ನಡ ಜನತೆ ರಿಪೇರಿ ಮಾಡುತ್ತಾರೆ" ಎಂದು ಕಸಾಪ ಮಾಜಿ ಅಧ್ಯಕ್ಷ ಚಂಪಾ ಬರೆದಿದ್ದಾರೆ. ಪ್ರಗತಿಪರರು, ಚಿಂತಕರು ಎನಿಸಿಕೊಂಡ ಕೆಲವರು ಬಹಿರಂಗವಾಗಿ ಮಠಗಳೊಂದಿಗೆ ಗುರುತಿಸಿಕೊಳ್ಳಲು ಸಿದ್ಧರಿಲ್ಲ. ಹಾಗೆ ಗುರುತಿಸಿಕೊಂಡರೆ ಎಲ್ಲಿ ತಮ್ಮ ಪ್ರಗತಿಪರ 'ಪಟ್ಟ'ಕ್ಕೆ ಧಕ್ಕೆ ಬರುತ್ತದೋ ಎಂಬ ಆತಂಕ ಅವರಿಗಿದೆ. ಆದರೆ ಅಂತರಂಗದಲ್ಲಿ ಮಠಗಳ ಸಹಾಯ ಮಾತ್ರ ಅವರಿಗೆ ಬೇಕು. ಇದಕ್ಕೆ ತೀರಾ ಇತ್ತೀಚಿನ ಉದಾಹರಣೆ ಎಂದರೆ ನಾಗನೂರು ಶ್ರೀಗಳು ಮೊನ್ನೆ ನಮ್ಮನ್ನು ಸಿರಿಗೆರೆಯಲ್ಲಿ ಭೇಟಿಯಾದಾಗ ಹೇಳಿದ ಸಂಗತಿ. ಕ.ಸಾ.ಪ ದ ಮಾಜಿ ಅಧ್ಯಕ್ಷರಾದ ಚಂಪಾ ಮುಂದೆ ಕ.ಸಾ.ಪ ಅಧ್ಯಕ್ಷಸ್ಥಾನಕ್ಕೆ ಮತ್ತೊಮ್ಮೆ ಸ್ಪರ್ಧಿಸಲು ಬಯಸಿದ್ದು ತಮ್ಮ ಬೆಂಬಲ ಬೇಕೆಂದು ಕೋರಿ ಕೆಲವು ದಿನಗಳ ಹಿಂದೆ ನಾಗನೂರು ಶ್ರೀಗಳಿಗೆ ಫೋನ್ ಮಾಡಿದ್ದರಂತೆ. ಚುನಾವಣೆಯ 'ಗರ' ಹೊಡೆದಾಗ ಮಾತ್ರ ಅಂತರಂಗದಲ್ಲಿ ಮಠ-ಪೀಠಗಳ ಸಹಾಯ ಬೇಕು. ಬಹಿರಂಗವಾಗಿ ಗುರುತಿಸಿಕೊಳ್ಳಲು ಆಗದು. ಇದೇತರ ಪ್ರಗತಿಪರ ಧೋರಣೆ? 'ಏನಯ್ಯಾ ವಿಪ್ರರು ನುಡಿದಂತೆ ನಡೆಯರು, ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ' ಎಂಬ ಬಸವಣ್ಣನವರ ವಚನ ನೆನಪಾಗುತ್ತದೆ. ಇದೇ ಚಂಪಾ ಅವರು 1999 ರ ಜನವರಿಯಲ್ಲಿ ಹೊಸದುರ್ಗದಲ್ಲಿ ನಮ್ಮ ಸಮ್ಮುಖದಲ್ಲಿ 'ಚಿತ್ರದುರ್ಗ ಜಿಲ್ಲಾ ಸಾಹಿತ್ಯಸಮ್ಮೇಳನ' ನಡೆದಾಗ ಸಮಾರೋಪ ಭಾಷಣ ಮಾಡಲು ಬಂದಿದ್ದರು. 'ಬೆಂಗಳೂರಿನಿಂದ ಹೊರಡುವಾಗ ಸ್ವಾಮಿಗಳ ಸಾನ್ನಿಧ್ಯವಿದೆಯೆಂದು ಮೊದಲೇ ಗೊತ್ತಾಗಿದ್ದರೆ ನಾನು ಈ ಸಮ್ಮೇಳನಕ್ಕೆ ಬರುತ್ತಿರಲಿಲ್ಲ' ಎಂದು ಕಡ್ಡಿಮುರಿದಂತೆ ಹೇಳಿದ್ದರು. ಎಲ್.ಬಿ ಅವರನ್ನು ಕುರಿತು ಆಡಿದ ನಮ್ಮ ಮಾತಾದರೂ ಚಂಪಾರವರ ಮಾತಿನ ಪ್ರತಿಧ್ವನಿಯೇ ಹೊರತು ಬೇರೇನೂ ಅಲ್ಲ. ಆದಕಾರಣ ಸಾಹಿತ್ಯವಲಯದಲ್ಲಿ ಚರ್ಚೆಯಾಗಬೇಕಾದ್ದು ಚಂಪಾರವರ ಮಾತೇ ಹೊರತು ನಮ್ಮ ಮಾತಲ್ಲ. Over to ಚಂಪಾ!

ಮೈಸೂರಿನ ಇನ್ನೋರ್ವ ಸಾಹಿತಿಗಳು ಮಠಾಧಿಪತಿಗಳ ಗಣದ 'ದಿವ್ಯಸಾನ್ನಿಧ್ಯ'ವನ್ನು ಪ್ರಸ್ತಾಪಿಸಿ 'ಸಾಹಿತ್ಯ ಪರಿಷತ್ತು ಗುಡಿ, ಮಠ ಬಿಟ್ಟು ಹೊರಬಂದಿಲ್ಲ; ಚರ್ಚು, ಮಸೀದಿಗಳತ್ತ ಹೋದಂತಿಲ್ಲ' ಎಂದು ಆಕ್ಷೇಪಿಸಿ ಪತ್ರಿಕೆಗಳಲ್ಲಿ ಬರೆದಿದ್ದರು. ಆ ಹಿನ್ನೆಲೆಯಲ್ಲಿ ಅಮೃತಮಹೋತ್ಸವಕ್ಕೆಂದೇ ರಚಿಸಿದ್ದ 'ಕನ್ನಡದ ಕಾವ್ಯಕನ್ನಿಕೆ' ಎಂಬ ನಮ್ಮ ಒಂದು ಕವಿತೆಯನ್ನು ವಾಚನ ಮಾಡಿ ಸಮಾರಂಭಕ್ಕೆ ಶುಭ ಕೋರಿದ್ದು ಅದರ ಆಯ್ದ ಭಾಗ ಹೀಗಿದೆ:

**ಗುಡಿ-ಚರ್ಚು-ಮಸೀದಿಯ ಭೇದವೇತಕೆ**
**ಸ್ವಾಮಿ-ಪಾದ್ರಿ-ಮೌಲ್ವಿಯ ನಿಂದನೆ ಏತಕೆ**
**ಜಾತಿ-ಮತ-ಪಂಥಗಳ ಹೀಗಳೆದು ಹೋಗುವೆ ಎಲ್ಲಿಗೆ?**
**ಬಿಡಿಸಲಾಗದ ಬವಣೆ ಇದು**
**ಈಗಿರುವ ಹಳೆಯ ಹಣೆಪಟ್ಟಿಗಳೇ ಸಾಕು!**
**ಭದ್ರ ಮತಪೆಟ್ಟಿಗೆ!**

**ನಿಲ್ಲಿಸು, ಹೊಸ ಹಣೆಪಟ್ಟಿ ಹಚ್ಚುವೆ ಏತಕೆ?**
**ಭ್ರಾಂತಿ ನಿನಗೆ!**
**ಬಾ ಬಾ ಬಾರ ಬಿಗುಮಾನ ಬಿಟ್ಟು ಹತ್ತಿರಕೆ**
**ಒಂದಾಗಿ ಕನ್ನಡದ ಕಾವ್ಯರಸಾಸ್ವಾದಕೆ!**

18.2.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑